ಇ. ಕಾರ್ಪೊರೇಷನ್ ಬ್ಯಾಂಕ್ ಪಾರ್ಕ್‌ನ್ನು ಮಾತ್ರ ಖಾಸಗಿಯವರಿಗೆ ನೀಡಲಾಗಿದೆ. ಉಳಿದ ಮೈದಾನ ಹಾಗು ಉದ್ಯಾನವನಗಳು ಮಹಾನಗರ ಪಾಲಿಕೆಯಿಂದ ನಿರ್ವಹಿಸಲ್ಪಡುತ್ತಿವೆ.

1594 (2121) ಶ್ರೀ ಕೃಷ್ಣ ಪಾಲೇಮರ್. ಜೆ. (ಸುರತ್ಕಲ್) ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಹಬ್ಬುತ್ತಿರುವ ನಕ್ಸಲೀಯ ಚಟುವಟಿಕೆಗಳ ಕುರಿತಾದ ಸರ್ಕಾರದ ನಿಗ್ರಹದ ಕಾರ್ಯಕ್ರಮಗಳೇನು ?

ಆ. ನಕ್ಸಲ್ ವಾದದ ಛಾಯೆಯು ಶಾಲಾ ಕಾಲೇಜುಗಳಿಗೂ ವಿಸ್ತರಣೆಯಾಗುತ್ತಿರುವುದು ನಿಜವೇ?

ಇ. ನಿಜವಾಗಿದ್ದಲ್ಲಿ ಆ ಕುರಿತಾದ ಸರ್ಕಾರದ ಮುಂಜಾಗ್ರತಾ ಕ್ರಮಗಳೇನು ?

ಈ. ನಕ್ಸಲ್ ವಾದಕ್ಕೆ ಪ್ರತ್ಯಕ್ಷ–ಪರೋಕ್ಷ ಬೆಂಬಲ ನೀಡುತ್ತಿರುವ ಅಧಿಕಾರಿಗಳು, ಆಧ್ಯಾಪಕರುಗಳು ಇದ್ದಾರೆಂಬ ವಿಚಾರವನ್ನು ಸರ್ಕಾರ ಗಮನಿಸಿದೆಯೇ?

ಉ. ಗಮನಿಸಿದ್ದಲ್ಲಿ ಈ ಕುರಿತಾದ ಕಟ್ಟುನಿಟ್ಟಿನ ಕ್ರಮ ನಿಯಮಗಳೇನು ?

ಊ. ಬಹಿರಂಗವಾಗಿ ನಕ್ಸಲ್ ವಾದವನ್ನು ಬೆಂಬಲಿಸಿ ಪ್ರೋತ್ಸಾಹಿಸುತ್ತಿರುವ ಕೆಲವು ಜನರ ಕುರಿತು ಸರ್ಕಾರ ಯಾವ ಕ್ರಮವನ್ನು ಜರುಗಿಸಿದೆ ?

ಶ್ರೀ ಧರಂಸಿಂಗ್ (ಮುಖ್ಯಮಂತ್ರಿಯವರು) :

ಅ. ರಾಜ್ಯದಲ್ಲಿ ಹಬ್ಬುತ್ತಿರುವ ನಕ್ಸಲೀಯ ಚಟುವಟಿಕೆಗಳ ಸಮಸ್ಯೆಗಳನ್ನು ನಿಗ್ರಹಿಸಲು ಸರ್ಕಾರವು ಎರಡು ವಿಧಾನಗಳಲ್ಲಿ ಕ್ರಮ ಕೈಗೊಂಡಿರುತ್ತದೆ. ನಕ್ಸಲ್ ಸಮಸ್ಯೆವಿರುವ ಜಾಗಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಲ್ಲದೆ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಪೊಲೀಸ್ ದಳವನ್ನು ಬಲಪಡಿಸಲಾಗಿದೆ. ನಕ್ಸಲೀಯ ಚಟುವಟಿಕೆವಿರುವ ಮಲೆನಾಡು ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ 23 ಕೋಟಿ ರೂಪಾಯಿ ಪ್ಯಾಕೇಜನ್ನು ಸರ್ಕಾರವು ನೀಡಿರುತ್ತದೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಗುಪ್ತ ಮಾಹಿತಿಗಳನ್ನು ಸಂಗ್ರಹಿಸುವಿಕೆಯನ್ನು ಬಲಪಡಿಸಿದ್ದು ನಕ್ಸಲೀಯರ ಶೋಧನಾ ಕಾರ್ಯಾಚರಣೆ ಮಂದುವರೆದಿದೆ.

ಆ. ಗುಪ್ತ ಮಾಹಿತಿ ವರದಿಗಳನ್ವಯ ಕೆಲವು ವ್ಯಕ್ತಿಗಳು ನಕ್ಸಲೀಯ ಸಿದ್ಧಾಂತಗಳಿಗೆ ಆಕರ್ಷಿಸಲು ಶಾಲಾ, ಕಾಲೇಜು, ಮತ್ತು ವಿದ್ಯಾರ್ಥಿ ವಸತಿ ನಿಲಯಗಳಿಗೆ ಭೇಟಿ ನೀಡುತ್ತಿರುವ ಬಗ್ಗೆ ಮಾಹಿತಿ ಲಭ್ಯವಾಗಿರುತ್ತದೆ.

ಇ. ಇಂತಹ ಸ್ಥಳ ಮತ್ತು ವ್ಯಕ್ತಿಗಳ ಮೇಲೆ ನಿಗಾ ವಹಿಸಲಾಗಿದೆ.

ಈ. ಹೌದು.

ಉ. ಅಗತ್ಯವಾದ ಶಿಸ್ತಿನ ಮತ್ತು ಕಾನೂನಿನ ಅನ್ವಯ ಕ್ರಮಕೈಗೊಳ್ಳಲು ಅಗತ್ಯವಾದ ಶಾಸನಬದ್ಧ ಮಾಹಿತಿಗಳನ್ನು ಸಂಗ್ರಹಿಸಲು ಕ್ರಮಕೈಗೊಳ್ಳಲಾಗಿದೆ.

ಊ. ನಕ್ಸಲೀಯ ಚಟುವಟಿಕೆಗಳಲ್ಲಿ ಬಹಿರಂಗವಾಗಿ ದುಷ್ಕಾರ್ಯ ಮಾಡುವವರಿಗೆ ಒತ್ತಾಸೆ ಕೊಡುವಂತಹ ವ್ಯಕ್ತಿಗಳ ವಿರುದ್ಧ ಕಾನೂನಿನ ಅನ್ವಯ ಕ್ರಮ ಕೈಗೊಳ್ಳಲಾಗಿದೆ. (The Unlawful Acitivities (Prevention) Amendment Act, 2004 ಪ್ರಕಾರ ಕಾನೂನಿನ ಕ್ರಮ ಕೈಗೊಳ್ಳಲಾಗುತ್ತಿದೆ.